# ಕ್ರಿಯಾಶೀಲತೆಯ ದಾರಿ

ಕಲೆಗಳ ಕುರಿತಂತೆ ಆಯಾ ಪ್ರಕಾರಗಳಲ್ಲಿ ತಿಳಿವಳಿಕೆ, ಪರಿಣತಿ ಇರುವವರು ಮಾತನಾಡುತ್ತ ಬಂದಿರುವುದನ್ನು ಅನೇಕರು ಗಮನಿಸಿರುತ್ತಾರೆ. ಸಾಹಿತ್ಯದ ಬಗ್ಗೆ ಸಾಹಿತಿ, ಕಲಾಕೃತಿಯ ಬಗ್ಗೆ ಕಲಾವಿದ, ಕಲಾವಿಮರ್ಶಕ, ಸಂಗೀತದ ಬಗ್ಗೆ ಅದರ ರಸಿಕರು ತಮ್ಮ ಅಭಿಪ್ರಾಯ, ಒಳನೋಟಗಳನ್ನು ಕೊಡುವುದನ್ನು ಕಾಣಬಹುದು. ತಾನು ಓದಿದ ಸಾಹಿತ್ಯವನ್ನು ಸಂಗೀತಗಾರ, ಕಂಡ ಕಲಾಕೃತಿಯ ಬಗ್ಗೆ ರಾಜಕಾರಣಿ, ನೃತ್ಯದ ಕುರಿತು ವಾಸ್ತುಶಿಲ್ಪಿ, ನಾಟಕಗಳ ಬಗ್ಗೆ ಸಂಗೀತಗಾರ, ಬೇಂದ್ರೆ ಕವಿತೆಗಳ ಕುರಿತು ಟೆನಿಸ್ ಆಟಗಾರ ಮಾತನಾಡುವುದನ್ನು ಕಲ್ಪಿಸುವುದೇ ಇಲ್ಲಿ ದುಬಾರಿ ಸಂಗತಿಯಾಗಿದೆ. ಇದಕ್ಕೆ ಕೆಲವು ಸಾಹಿತಿ ಮತ್ತು ಪತ್ರಕರ್ತರು ಅಪವಾದ. ಅವರು ಬೇಕಿರಲಿ, ಬೇಡದಿರಲಿ ರಾಜಕಾರಣ, ಸಂಗೀತ, ಕಲೆ, ಆಟ, ಕೂಟ ಎಲ್ಲದರ ಬಗ್ಗೆ ತಮ್ಮ ಖಚಿತ(!?) ಅಭಿಪ್ರಾಯಗಳನ್ನು ಕಾಲಕಾಲಕ್ಕೆ ದಾಖಲಿಸುತ್ತಲೇ ಇರುತ್ತಾರೆ. ಆ ರಂಗಗಳ ಬಗ್ಗೆ ಅವರ ಜ್ಞಾನ ಎಷ್ಟು ಆಳ, ವಿಸ್ತಾರದಿಂದ ಕೂಡಿದೆ ಎಂಬುದು ತನಿಖೆಗೆ ಅರ್ಹವಾದುದು. ಆದರೂ ಜಗದ ಸಂತೆಯಲ್ಲಿ ಅವರು ಮಾಡುವ ಗದ್ದಲ ಜನರನ್ನು ಅತ್ತ ತಿರುಗಿ ನೋಡುವಂತೆ ಮಾಡುತ್ತದೆ.

ಕನ್ನಡದಲ್ಲಿ ಶಿವರಾಮ ಕಾರಂತ, ಕುವೆಂಪು ಅವರ ಕಾದಂಬರಿಗಳ ಬಗ್ಗೆ, ಎಕ್ಕುಂಡಿಯವರ ಕವಿತೆ, ತೇಜಸ್ವಿ ಪ್ರಬಂಧ, ಮಾಸ್ತಿ ಕತೆಗಳ ಬಗ್ಗೆ ಸಂಗೀತಗಾರರಾಗಲೀ, ಕಲಾವಿದರಾಗಲೀ, ನಟರಾಗಲೀ ತಮ್ಮ ಅಭಿಪ್ರಾಯ ಕೊಟ್ಟಿದ್ದು ಇಲ್ಲ ಅನ್ನುವಷ್ಟು ಕಡಿಮೆ. ಅವರು ಕೊಡಲೇಬೇಕು ಎಂದು ಹಕ್ಕೊತ್ತಾಯ ಮಾಡಲು ಆಗುವುದಿಲ್ಲವಾದರೂ ಒಂದೊಂದು ಕಲಾಪ್ರಕಾರಗಳಲ್ಲಿ ಕೆಲಸ ಮಾಡುತ್ತಿರುವವರು ತಮ್ಮ ಆಸಕ್ತಿಯ ಬೇರೆ ಕಲೆಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಕೊಟ್ಟರೆ ಅದು ಬೇರೆಯದೇ ಸ್ವರೂಪವನ್ನು ಹೊಂದಿರುತ್ತದೆ. ಮಾತ್ರವಲ್ಲ, ಆ ಕಲೆಯನ್ನು ಬೇರೆ ರೀತಿಯಿಂದ ನೋಡುವಂತೆ ಮಾಡಬಹುದು. ಪ್ರಕಾರಗಳ ಹೆಸರು ಬೇರೆ ಆದರೂ ಆಳದಲ್ಲಿ ಅವು ಪರಸ್ಪರ ಸಂಬಂಧ ಹೊಂದಿರುತ್ತವೆ; ಒಂದಕ್ಕೊಂದು ಹೆಣೆದುಕೊಂಡಿರುತ್ತವೆ. ಎಲ್ಲ ಕಲೆಗಳ ಮೂಲ ಉದ್ದೇಶವೇ ಅನುಭವ, ನೋವನ್ನು ಅಭಿವ್ಯಕ್ತಿಸುವುದು ಮತ್ತು ಮನುಷ್ಯನಿಗೆ ಸಂತೋಷ, ಶಾಂತಿ, ನೆಮ್ಮದಿಯನ್ನು ಕೊಡುವುದಾಗಿದೆ.

ಎಲ್ಲ ಕಲೆಗಳೂ ಸಾಮೂಹಿಕ ಚಟುವಟಿಕೆಗಳೇ. ಎಲ್ಲರೂ ಸೇರಿಯೇ ಅವನ್ನು ಬೆಳೆಸಬೇಕಿದೆ. ತಮ್ಮ ಪಾಡಿಗೆ, ತಮ್ಮದೇ ಲೋಕದಲ್ಲಿ ತಾವಿದ್ದು, ಇದಿಷ್ಟೇ ನಾನು ಸಾಗುವ ದಾರಿ, ನನ್ನ ಕಲೆಯೇ ನನ್ನ ಸರ್ವಸ್ವ ಎಂಬ ಮಿತಿಗಳನ್ನು ಕ್ರಿಯಾಶೀಲ ಮಂದಿ ಹಾಕಿಕೊಂಡರೆ ಅವರ ಕಲೆಯೂ ಬೆಳೆಯುವುದಿಲ್ಲ; ಸಾಂಸ್ಕೃತಿಕಲೋಕವೂ ಜಡಗೊಳ್ಳುತ್ತದೆ. ಎಲ್ಲ ಕಲೆ, ರಂಗಗಳ ಹೊಕ್ಕುಬಳಕೆ, ಅಲ್ಲಿ ಬರುವ ಟೀಕೆ, ಆಗುವ ಜಗಳಗಳು ಸಮಾಜಕ್ಕೆ ಹೊಸಚೈತನ್ಯ ಕೊಡಬಹುದು. ಇಲ್ಲದಿದ್ದರೆ ತಮ್ಮ ವಂದಿಮಾಗಧರಿಂದ ಆಕಳಿಸುವ ಸೆಮಿನಾರುಗಳನ್ನು ಮಾಡಿಸುವ ಸಾಹಿತಿಗಳು, ಕಲಾಕೃತಿಗಳ ಪ್ರದರ್ಶನಗಳನ್ನು ಏರ್ಪಡಿಸುವ ಕಲಾವಿದರು, ದೊಡ್ಡ ವೇದಿಕೆಗಳಲ್ಲಿ ಹಾಡುವ ಸಂಗೀತಗಾರರು ಬೇರೆಬೇರೆಯಾಗಿಯೇ ದ್ವೀಪಗಳಂತೆ ಉಳಿದುಹೋಗುತ್ತಾರೆ. ಅವರನ್ನೆಲ್ಲ ಬೆಸೆಯುವ ತಂತುವೊಂದು ಎಲ್ಲೋ ಕಳೆದುಹೋಗಿದೆ. ಪರಸ್ಪರರ ಕೃತಿಗಳ ಬಗ್ಗೆ ಮಾತನಾಡುತ್ತಲೇ ಬೆಳೆಯಬಹುದಾದ ದಾರಿಯಷ್ಟೇ ಸದ್ಯಕ್ಕಿರುವುದು.

**ಸಂದೀಪ ನಾಯಕ**

